ಇ) ಪಂಪ್‌ಸೆಟ್ ನಾದುರಸ್ತಿಯಿಂದ ಯೋಜನೆ ಸ್ಥಗಿತಗೊಂಡಿರುವುದಿಲ್ಲ. ಆದರೆ ಕೆಲವು ದಿನಗಳಿಂದ ಪಿವಿಸಿ ಪೈಪ್ ಲೈನಿನಲ್ಲಿ ಅಡಚಣೆ ಉಂಟಾಗಿತ್ತು. ದಿನಾಂಕ ೧೫-೪-೧೯೮೬ ರಿಂದ ಲೈನ್ ರಿಪೇರಿ ಮಾಡಿ ಗ್ರಾಮಕ್ಕೆ ನೀರು ಸರಬರಾಜು ಮಾಡಲಾಗಿದೆ.

ಪುನಹ ದಿನಾಂಕ ೧೦-೩-೧೯೮೮ ರಿಂದ ೨೪-೨-೧೯೮೮ರ ವರೆಗೆ ಪೈಪ್ ದುರಸ್ತಿ ಮಾಡಬೇಕಾದ ಕಾರಣದಿಂದ ನೀರು ಸರಬರಾಜು ಸ್ಥಗಿತಗೊಂಡಿತ್ತು. ಇದನ್ನು ೨೫-೨-೧೯೮೮ರಂದು ರಿಪೇರಿ ಮಾಡಿರುವುದರಿಂದ ಈಗ ನೀರು ಸರಬರಾಜು ಆಗುತ್ತಿದೆ.

ಈ) ನೀರನ್ನು ಒದಗಿಸಿರುವುದರಿಂದ ಶಿಸ್ತಿನ ಕ್ರಮ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಮೂರವತ್ತೊಂದನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ೩೧ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಮೈಸೂರಿನ ದಸರಾ ವಸ್ತು ಪ್ರದರ್ಶನದ ಬಗ್ಗೆ

೧೫೯೦. **ಶ್ರೀ ಡಿ. ಟಿ. ಜಯಕುಮಾರ್** (ನಂಜನಗೂಡು).—ಮಾನ್ಯ ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರಿನ ''ದಸರಾ ವಸ್ತು ಪ್ರದರ್ಶನದಲ್ಲಿ'' ಇದುವರೆಗೂ ಆಗುತ್ತಿರುವ ನಷ್ಟ ಮತ್ತು ಲೋಪದೋಷಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಇದಕ್ಕೆ ಕಾರಣ ಬೇರೆ ಬೇರೆ ಇಲಾಖೆಯವರಿಗೆ ಅಡಳಿತ ವಹಿಸುತ್ತಿರುವುದರಿಂದಲ್ಲವೇ ?

ಇ) ಈ ವಸ್ತು ಪ್ರದರ್ಶನದ ಜವಾಬ್ದಾರಿಯನ್ನು ನೋಡಿಕೊಳ್ಳಲು ಶಾಶ್ವತವಾದ ಉನ್ನತ ಸಮಿತಿಯೊಂದನ್ನು ರಚಿಸಲಾಗುವುದೇ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಬಂದಿದೆ.

ಆ) ಇಲ್ಲ.

ಇ) ಇಲ್ಲ.

ವಿಮಾನ ಹಾರಾಟ ತರಬೇತಿ ಶಾಲೆ

೧೬೧೯. **ಶ್ರೀ ಎನ್. ಎಂ. ಅಡ್ಯಂತಾಯ** (ಸುರತ್ಕಲ್).—ಮಾನ್ಯ ಗಣಿ ಭೂವಿಜ್ಞಾನ ಮತ್ತು ಯುವ ಜನ ಸೇವಾ ಕ್ರೀಡಾ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನಲ್ಲಿ ವಿಮಾನ ಹಾರಾಟ ತರಬೇತಿ ಶಾಲೆಯನ್ನು ಪ್ರಾರಂಭಿಸುವ ನಿರ್ಧಾರ ರಾಜ್ಯ ಸರ್ಕಾರವು ಕೈಗೊಂಡಿದೆಯೇ ?

ಆ) ಹಾಗಿದ್ದಲ್ಲಿ,ಈ ಶಾಲೆಯ ಸ್ಥಾಪನೆಯ ದಿಶೆಯಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಆರ್. ಸಿ. ಜಿಗಜಿಣಗಿ (ಗಣಿ, ಭೂವಿಜ್ಞಾನ ಮತ್ತು ಯುವ ಜನ ಸೇವಾ ಕ್ರೀಡಾ ರಾಜ್ಯ ಮಂತ್ರಿಗಳು).—

ಅ) ಹೌದು ಈಗಾಗಲೇ ಸರ್ಕಾರವು ನಿರ್ಧಾರ ಕೈಗೊಂಡಾಗಿದೆ.